ಶ್ರೀ ಚಂದ್ರಕಾಂತ ಜಿ ಬೆಲ್ಲದ್.—ನಾನು ಏತಕ್ಕೆ ಇದನ್ನು ಹೇಳಂತ್ತಿದ್ದೇನೆಂದರೆ ನಮ್ಮ ಕರ್ನಾಟಕದ ಜನರಿಗೆ ಈ ನಿವೇಶನಗಳೇ ಸಿಕ್ಕುತ್ತಿಲ್ಲ. ಬೇರೆ ರಾಜ್ಯಗಳಿಂದ ಬಂದಿರತಕ್ಕ ಜನರಿಗೆ ನಿವೇಶನಗಳು ಸಿಕ್ಕುತ್ತಿವೆಯೆಂದು ತಿಳಿದು ಬಂದಿದೆ. ಇದರ ಬಗ್ಗೆ ಇರತಕ್ಕ ನ್ಯೂನತೆಯನ್ನು ತಾವು ಸರಿಪಡಿಸುತ್ತೀರಾ?

ಶ್ರೀ ಎ. ಲಕ್ಷ್ಮೀಸಾಗರ್.—ತಾವು ಖಚಿತವಾದ, ನಿರ್ದಿಷ್ಟವಾದ ಪ್ರಕರಣವನ್ನು ತೋರಿಸಿ ಇಂಥ ವ್ಯಕ್ತಿ ಕರ್ನಾಟಕದಲ್ಲಿ ೧೦ ವರ್ಷಗಳಿಗಿಂತಲೂ ಕಡಿಮೆ ವಾಸವಾಗಿದ್ದು ಈಗ ನಿವೇಶನವನ್ನು ಪಡೆದುಕೊಂಡಿದ್ದಾನೆಂದು ತಾವು ಹೇಳಿದರೆ, ಆಗ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ.

(ಶ್ರೀ ಕೌಜಲಗಿ.—ಇತರ ಸದಸ್ಯರು ಹಾಜರಿರಲಿಲ್ಲ.)

ಅಧ್ಯಕ್ಷರು.— ಮುಂದೂಡಿದ ಪ್ರಶ್ನೆಗಳು ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ನೀಡಲಾದ ಲಿಖಿತ ಉತ್ತರಗಳು

ಶ್ರೀ ಎ. ಲಕ್ಷ್ಮೀಸಾಗರ್.— ಮಾನ್ಯ ಅಧ್ಯಕ್ಷರೇ ಲಿಖಿತಮೂಲಕ ಉತ್ತರಿಸುವ ಪ್ರಶ್ನೆಗಳನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.— ಲಿಖಿತ ಮೂಲಕ ಉತ್ತರಿಸಲಾದ ಪ್ರಶ್ನೆಗಳನ್ನು ಸಭೆಯ ಮುಂದಿಡಲಾಯಿತು.

ಬಿಜಾಪುರ ಜಿಲ್ಲೆಯ ಬಾದಾಮಿ ತಾಲ್ಲೂಕಿನ ಲಖಾಪುರ ಗ್ರಾಮದಲ್ಲಿರುವ ಕೊಳವೆ ಬಾವಿ ದುರಸ್ತಿ ಬಗ್ಗೆ

೫೧೧. **ಶ್ರೀ ಗೋಪಾಲ ಮಂಕಂದ ಕಾನಡೆ.**—ಮಾನ್ಯ ಗ್ರಾಮೀಣ ಅಭಿವೃದ್ಧಿ ವಸತಿ ಮಂತ್ರಿ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬಿಜಾಪುರ ಜಿಲ್ಲೆಯ ಬಾದಾಮಿ ತಾಲ್ಲೂಕಿನ ಲಖಾಪುರ ಗ್ರಾಮದಲ್ಲಿ ಕೊಳವೆ ಬಾವಿ ನಿರ್ಮಿಸಿ ಅಲ್ಲಿಂದ ಪಂಪು ಮೂಲಕ ನೀರನ್ನು ತೊಟ್ಟಿಗೆ ಸಂಗ್ರಹಿಸಿ ಗ್ರಾಮಕ್ಕೆ ನೀರನ್ನು ಒದಗಿಸಂತ್ತಿದ್ದುದಿಂ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಕಳೆದ ಎರಡು ವರ್ಷಗಳಿಂದ ಸದರೀ ಕೊಳವೆ ಬಾವಿ ಮಂತ್ತು ಪಂಪುಸೆಟ್ಟು ಕೆಟ್ಟು ಹೋಗಿ ಗ್ರಾಮದ ಜನತೆಯು ಕುಡಿಯುವ ನೀರಿನ ಬಗ್ಗೆ ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಇ) ಹಾಗಿದ್ದಲ್ಲಿ ಸದರೀ ಕೆಲಸವನ್ನು ದುರಸ್ತಿ ಮಾಡಿಸಿ ನೀರನ್ನು ಒದಗಿಸುವಂತೆ ಗ್ರಾಮಸ್ಥರು ಸರ್ಕಾರದವರಿಗೆ ವಿನಂತಿ ಮಾಡಿಕೊಂಡಿರುವುದಂ ನಿಜವೆ ?

ಈ) ಹಾಗಿದ್ದಲ್ಲಿ ಇದುವರೆವಿಗೂ ಸರ್ಕಾರದವರಂ ಯಾವುದೇ ರೀತಿ ಕ್ರಮ ಕೈಗೊಳ್ಳದೇ ಇರಲು ಕಾರಣಗಳೇನು ?

ಉ) ಸದರಿ ಗ್ರಾಮಂಕ್ಕೆ ತುರ್ತಾಗಿ ನೀರನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣ ಅಭಿವೃದ್ಧಿ, ವಸತಿ ಮತ್ತು ವಕ್ಫ್ ಮಂತ್ರಿಗಳು).—

ಅ) ಬಂದಿದೆ.

ಆ) ಬಂದಿದೆ.

ಇ) ೨೯-೧-೮೬ರಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು ಜನಾರೋಗ್ಯ ಶಿಲ್ಪ ಕಾರ್ಯ ಉಪ ವಿಭಾಗ, ಬಾಗಲಕೋಟೆ ಇವರಿಗೆ ನೀರು ಸರಬರಾಜು ಯೋಜನೆ ಕುಂಠಿತಗೊಂಡಿರುವ ಬಗ್ಗೆ ಒಂದು ಮನವಿ ಬಂದಿರುತ್ತದೆ.

ಈ) ಸದರೀ ಯೋಜನೆಯನ್ನು ದುರಸ್ತಿ ಮಾಡಿ ದಿನಾಂಕ: ೧೨–೨–೮೬ರಿಂದ ಗ್ರಾಮಸ್ಥರಿಗೆ ನೀರನ್ನು ಪೂರೈಸಲಾಗಿಂತಿದೆ. ಸದರೀ ಗ್ರಾಮದಲ್ಲಿ ಪುಸ್ತುತ ನೀರಿನ ತೊಂದರೆ ಇರುವುದಿಲ್ಲ.

ಉ) ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ.

ಇಂಚಲ ಗ್ರಾಮದಲ್ಲಿ ಕುಡಿಯುವ ನೀರಿನ ಕೊರತೆ ಬಗ್ಗೆ

೬೪೯. ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ).— ಮಾನ್ಯ ಗ್ರಾಮಿಣಾಭಿವೃದ್ಧಿ ವಸತಿ ಮತ್ತು ಪಕ್ಷ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧) ಬೆಳಗಾಂವ ಜಿಲ್ಲೆಯ ಸವದತ್ತಿ ತಾಲ್ಲೂಕಿನ ಇಂಚಲ ಗ್ರಾಮದಲ್ಲಿ ಕುಡಿಯುವ ನೀರಿನ ಕೊರತೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

೨) ಹಾಗಿದ್ದಲ್ಲಿ ಸರ್ಕಾರದವರು ಅದನ್ನು ನಿವಾರಿಸಲು ಯಾವ ಕ್ರಮವನ್ನು ಕೈಗೊಳ್ಳುವರು ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮಿಣಾಭಿವೃದ್ಧಿ ವಸತಿ ಮತ್ತು ಪಕ್ಷ ಮಂತ್ರಿಗಳು).—

೧) ಬಂದಿದೆ.

೨) ಕೈ ಪಂಪುಗಳು ಅಳವಡಿಸಲಾದ ೫ ಯಶಸ್ವಿಯಾದ ಕೊಳವೆ ಬಾವಿಗಳು ಕಾರ್ಯಾಚರಣೆಯಲ್ಲಿರುತ್ತವೆ. ಒಂದು ರಾಷ್ಟ್ರೀಯ ಗ್ರಾಮಾಂತರ ನೀರು ಸರಬರಾಜು ಯೋಜನೆಯು ರೂ ೭.೬೯ ಲಕ್ಷಕ್ಕೆ ೬–೨–೮೫ರಲ್ಲಿ ಮಂಜೂರಾತಿಯಾಗಿದ್ದು ಯೋಜನೆಯ ಕೆಲಸಗಳು ಪ್ರಗತಿಯಲ್ಲಿದ್ದು ೧೯೮೭–೮೮ರ ಅಂತ್ಯದೊಳಗೆ ಪೂರ್ಣಗೊಳಿಸಲಾಗುವುದು.

ನರೇಗಲ್ ನಗರ ನೀರು ಸರಬರಾಜು ಯೋಜನೆಯ ಬಗ್ಗೆ

೬೭೦. ಶ್ರೀ ಜ್ಞಾನದೇವ ದೊಡ್ಡಮೇಟಿ (ರೋಣ) — ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ನರೇಗಲ್ ನಗರ ನೀರು ಸರಬರಾಜು ಯೋಜನೆಯು ಪೂರ್ತಿಯಾಗಿದ್ದರೂ ನಗರದ ಇನ್ನೂ ಕೆಲವು ಭಾಗಗಳಿಗೆ ನೀರು ಪೂರೈಕೆಯಾಗುತ್ತಿಲ್ಲವೆನ್ನುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಆ) ಹಾಗಿದ್ದಲ್ಲಿ ಕುಡಿಯುವ ನೀರಿನ ಸಮರ್ಪಕ ಪೂರೈಕೆಗಾಗಿ ಹೆಚ್ಚುವರಿ ಯೋಜನೆಯನ್ನು ಮಂಜೂರು ಮಾಡುವಂತೆ ಸರ್ಕಾರದವರಿಗೆ ಮನವಿ ಬಂದಿದೆಯೆ ?

ಇ) ಹಾಗಿದ್ದಲ್ಲಿ ಯೋಜನೆಯ ಅಂದಾಜು ವೆಚ್ಚವೆಷ್ಟು ?

ಈ) ಯೋಜನೆಯನ್ನು ಯಾವಾಗ ಕಾರ್ಯಗತಗೊಳಿಸಲಾಗುವುದು ?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಸಂಸದೀಯ ವ್ಯವಹಾರಗಳು ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು).—

ಅ) ಬಂದಿದೆ.

ಆ) ಬಂದಿದೆ.

ಇ) ೧.೩೨ ಲಕ್ಷ ರೂಪಾಯಿಗಳು.

ಈ) ಯೋಜನೆಗೆ ಇನ್ನೂ ಮಂಜೂರಾತಿ ನೀಡಿಲ್ಲ. ಪರಿಷ್ಕೃತ ಅಂದಾಜಿಗೆ ಸರ್ಕಾರವು ಅನುಮೋದನೆ ನೀಡಿದ ಮೇಲೆ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಯು ಕೆಲಸಗಳನ್ನು ಕಾರ್ಯಗತಗೊಳಿಸುವುದು.